ಸವಿತಾ ಸಮಾಜದ ಜನತೆಗೆ ನೀಡಿರುವ ಸೌಲಭ್ಯಗಳು

೫೯೦. ಶ್ರೀ ಐ. ಬಿ. ಶಂಕರ್ (ಚಿಕ್ಕಮಂಗಳೂರು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸವಿತಾ ಸಮಾಜದ ಜನತೆ ಯಾವ ವರ್ಗಕ್ಕೆ ಸೇರಿದ್ದಾರೆ ಹಾಗೂ ಇವರಿಗೆ ಸರ್ಕಾರದಿಂದ ದೊರೆಯುತ್ತಿರುವ ಸವಲತ್ತು ಹಾಗೂ ಆದ್ಯತೆಗಳೇನು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಸವಿತಾ ಸಮಾಜ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಲ್ಲ. ಸವಿತಾ ಸಮಾಜದ ಜನತೆಯ ವಾರ್ಷಿಕ ಆದಾಯವು ಈ ಕೆಳಗೆ ತಿಳಿಸಿರುವ ಮೂಲಗಳಿಂದ ರೂ. ೪೮೦೦.೦೦ ರೊಳಗೆ ಇದ್ದಲ್ಲಿ ಹಿಂದುಳಿದ ವರ್ಗಗಳಿಗೆ ಒದಗಿಸುತ್ತಿರುವ ಎಲ್ಲಾ ಸಾಕಾರ್ಯಗಳನ್ನು ವಿಶೇಷ ಗುಂಪಿನ ಕೆಳಗೆ ಪಡೆಯಲು ಅರ್ಹರಿರುತ್ತಾರೆ.

೧. ವಾಸ್ತವ ಕೃಷಿಕನಾಗಿದ್ದರೆ, ಅಥವಾ

೨. ಕುಶಲ ಕಾರ್ಮಿಕನಾಗಿದ್ದರೆ, ಅಥವಾ

೩. ಸಣ್ಣ ವ್ಯಾಪಾರಿಯಾಗಿದ್ದರೆ, ಅಥವಾ

೪. ಸರ್ಕಾರಿ ಸೇವೆಯಲ್ಲಿರುವವರಾಗಿದ್ದರೆ, ಅಥವಾ ಅನಿಮಿತ ದುಡಿವೆಯನ್ನೊಳಗೊಂಡ ಖಾಸಗಿ ಉದ್ಯೋಗದಲ್ಲಿ ಸೇವೆಯಲ್ಲಿರುವವನಾಗಿದ್ದರೆ,

೫. ದೈಹಿಕ ಶ್ರಮವನ್ನೊಳಗೊಳ್ಳದ ಯಾವುದೇ ವೃತ್ತಿಯಲ್ಲಿ ಅಥವಾ ಸ್ವತಃ ಉದ್ಯೋಗದಲ್ಲಿ ತೊಡಗಿರುವನಾದರೆ.

೬. ಮೇಲೆ (೪)ರಲ್ಲಿ ಹೇಳಿರುವ ಹಂದ್ದೆಗಳಿಂದ ನಿವೃತ್ತರಾದವರು.

ಶ್ರೀ ಐ. ಬಿ. ಶಂಕರ್. —ಮಾನ್ಯ ಅಧ್ಯಕ್ಷರೇ, ವಾರ್ಷಿಕ ಆದಾಯ ೪೮೦೦ ರೂಪಾಯಿಗಳ ಒಳಗೆ ಇದ್ದರೆ, ಹಿಂದುಳಿದ ವರ್ಗಗಳಿಗೆ ಒದಗಿಸುತ್ತಿರುವ ಎಲ್ಲಾ ಅರ್ಹತೆಗಳನ್ನು ಪಡೆಯುತ್ತಾರೆ ಎಂದು ಹೇಳಿದ್ದಾರೆ. ಇದು ಪ್ರತಿಯೊಬ್ಬರಿಗೂ ಅನ್ವಯಿಸತಕ್ಕ ವಿಷಯ. ಆದರೆ ಸವಿತಾ ಸಮಾಜದವರು ಇವರಿಗೆ ಬಾರ್ಬರ್ಸ್ ಎಂದು ಏನು ಹೇಳುತ್ತಾರೆ. ಅವರು ನಮ್ಮ ಸಮಾಜದಲ್ಲಿ ಬಹಳ ಹಿಂದುಳಿದ ಜನ. ಅವರು ಬಹಳ ಹಿಂದುಳಿದ ವರ್ಗದವರಾಗಿದ್ದಾರೆ. ಇವರನ್ನು ಏತಕ್ಕೆ ಹಿಂದುಳಿದ ವರ್ಗಗಳಿಗೆ ಸೇರಿಸಿಲ್ಲ, ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈ ಸವಿತಾ ಸಮಾಜದವರಿಗೆ 'ನಾಯಿಂದ' ಎಂದೂ ಕರೆಯುತ್ತಾರೆ. ನಾಯಿಂದ ಎಂದು ಈಗ ಇದೆ. ಮುಂದೆ ಬರುವಂತಹ ಕಮಿಷನ್‌ನಲ್ಲಿ ಇದರ ಬಗ್ಗೆ ಸರ್ಕಾರ ಸೂಚನೆ ಮಾಡುತ್ತದೆ. ಅದನ್ನು ಆ ಕಮಿಷನ್‌ನವರು ಪರಿಶೀಲನೆ ಮಾಡುತ್ತಾರೆ.

ಬದಿರಾಯನ ಹಳ್ಳದಿಂದ ಜಂಬದ ಹಳ್ಳಿ ಜಲಾಶಯಕ್ಕೆ ನೀರನ್ನೊದಗಿಸುವುದು

೮೮೩. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಂಬದ ಹಳ್ಳ ಜಲಾಶಯಕ್ಕೆ ಹೋದಿರಾಯನ ಹಳ್ಳದಿಂದ ನೀರು ಒದಗಿಸುವ ಬಗ್ಗೆ ಈಗಾಗಲೇ ಯೋಜನೆ ಅಂದಾಜು ಮತ್ತು ಪೂರ್ವಭಾವಿ ಪರಿಶೀಲನೆ ಮುಗಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ, ೧೯೮೪-೮೫ರಲ್ಲಿ ಈ ಕಾರ್ಯಕ್ಕೆ ಒಂದು ಲಕ್ಷದಷ್ಟು ಹಣವನ್ನು ವಂಜಿಸಿರುವುದು ನಿಜವೆ ;

ಇ) ಹಾಗಿದ್ದಲ್ಲಿ, ಈ ಕಾರ್ಯವನ್ನು ಯಾವಾಗ ಮುಗಿಸಿ ರೈತರ ಉಪಯೋಗಕ್ಕೆ ಅನುವು ಮಾಡಲಾಗುತ್ತದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು). —

ಅ) ಬಂದಿದೆ.

ಆ) ಹೌದು.

ಇ) ಯೋಜನೆಯ ವರದಿಗೆ ತಾಂತ್ರಿಕ ಸಮಿತಿಯ ಒಪ್ಪಿಗೆ ಪಡೆದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ಪೂರ್ವಭಾವಿ ಪರಿಶೀಲನೆ ಮುಗಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ ಮತ್ತು ಜಂಬದಹಳ್ಳ ಜಲಾಶಯಕ್ಕೆ ಹೋದಿರಾಯನಹಳ್ಳದಿಂದ ಬೇಕಾದಷ್ಟು ನೀರು ಬಂದರೆ, ರೈತರಿಗೆ ಅನುಕೂಲವಾಗುತ್ತದೆ. ಪೂರ್ಣ ಅನುಕೂಲ ಆಗಬೇಕಾದರೆ, ಡೈವರ್ಷನ್ ಸ್ಕೀಂ ಆಗಬೇಕು. ಡೈವರ್ಷನ್ ಸ್ಕೀಂ ಆದರೆ ಸುಮಾರು ಒಂದು ಸಾವಿರ ಎಕರೆ ನೀರಾವರಿ ಆಗುತ್ತದೆ ಎಂದು ತಿಳಿದು ಬಂದಿದೆ. ಎಲ್ಲಾ ವರದಿಗಳು ಇದಕ್ಕೆ ಅನುಕೂಲಕರವಾಗಿ ಬಂದಿವೆ. ಹೋದ ವರ್ಷ ಎಂದರೆ ೧೯೮೪-೮೫ರಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟು ಇದನ್ನು ಬಜೆಟ್‌ನಲ್ಲಿ ಸೇರಿಸಿದ್ದರು. ಅದೇ ರೀತಿ ಇದನ್ನು ಈ ವರ್ಷದ ಬಜೆಟ್‌ನಲ್ಲೂ ಸೇರಿಸಬೇಕಾಗಿತ್ತು. ಈ ಕಾರ್ಯವನ್ನು ತಾವು ತೆಗೆದುಕೊಂಡರೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಅಧ್ಯಕ್ಷರು.—ಸಂಕ್ಷಿಪ್ತವಾಗಿ ಕೇಳಿರಿ.

ಶ್ರೀ ಬಿ. ಆರ್. ನೀಲಕಂಠಪ್ಪ.—ಈ ವರ್ಷ ಆಯವ್ಯಯದಲ್ಲಿ ಈ ಜಂಬದಹಳ್ಳ ಜಲಾಶಯ ಯೋಜನೆಯನ್ನು, ಎಂದರೆ ಹೋದಿರಾಯನ ಹಳ್ಳ ಡೈವರ್ಷನ್ ಸ್ಕೀಂನ್ನು ಸೇರಿಸಿ, ಕೆಲಸ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ —ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನನ್ನ ಮೊದಲನೆಯ ಪ್ರಶ್ನೆಗೆ ಬಂದಿದೆ ಎಂದು ತಿಳಿಸಿದ್ದಾರೆ. ಮತ್ತು ಜಂಬದಹಳ್ಳಿ ಜಲಾಶಯದಿಂದ ಅರ್ಧ ಭಾಗದಷ್ಟು ನೀರು ಬಂದು ರೈತರಿಗೆ ಅನುಕೂಲವಾಗುತ್ತಿದೆ. ಪೂರ್ಣವಾಗಿ ಅನುಕೂಲವಾಗಬೇಕಾದರೆ ಹೋದಿರಾಯನಹಳ್ಳದಿಂದ, ಬರತಕ್ಕ ನೀರನ್ನು ಡೈವರ್ಷನ್ ಮಾಡಿದರೆ ಒಂದು ಸಾವಿರ ಎಕರೆ ನೀರಾವರಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ಎಲ್ಲಾ ವರದಿಗಳು ಅನುಕೂಲಕರವಾಗಿ ಬಂದಿವೆ. ಹೋದವರ್ಷ ಅಂದರೆ ೮೪-೮೫ನೇ ಸಾಲಿನಲ್ಲಿ ಒಂದು ಲಕ್ಷ ಹಣವನ್ನು ಇದಕ್ಕಾಗಿ ಇಡಲಾಗಿತ್ತು. ಅದೇರೀತಿ ಈ ವರ್ಷವೂ ಕೂಡ ಬಜೆಟ್‌ನಲ್ಲಿ ಸೇರಿಸಿ, ಈ ಕಾರ್ಯವನ್ನು ಪೂರ್ಣ ಮಾಡಿದಲ್ಲಿ ಅನುಕೂಲವಾಗುತ್ತದೆಂದೂ ಹೇಳುತ್ತೇನೆ.

ಅಧ್ಯಕ್ಷರು.—ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಬಿ. ಆರ್. ನೀಲಕಂಠಪ್ಪ —ಬಂದಿರತಕ್ಕ ವರದಿಗಳು ಪೂರ್ಣವಾಗಿ ಅನುಕೂಲಕರವಾಗಿ ಬಂದಿವೆ. ಈ ವರ್ಷದ ಆಯವ್ಯಯದಲ್ಲಿ ಸೇರಿಸಬೇಕು. ಜಂಬದಹಳ್ಳಿ ಜಲಾಶಯಕ್ಕೆ, ಬದಿರಾಯನಹಳ್ಳದಿಂದ ಡೈವರ್ಷನ್ ಮಾಡುವ ಕೆಲಸ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ನೀವು ಹೇಳಿರುವುದೆಲ್ಲಾ ಸರಿ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಶಿಕಾರಿಪುರ ತಾಲ್ಲೂಕಿನಲ್ಲಿರುವ ಚೆಕ್ ಪೋಸ್ಟ್‌ಗಳು

೬೧೮. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ಈ ಹಿಂದೆ ಇದ್ದ ಚೆಕ್‌ಪೋಸ್ಟ್‌ಗಳೆಷ್ಟು? ಹಾಲಿ ಇರುವುದೆಷ್ಟು?